# ಪೀಠಿಕೆ

ಹೊಸ ಒಡಂಬಡಿಕೆಯಲ್ಲಿ ಪೌಲನ ಪತ್ರಿಕೆಗಳ ಅಂತ್ಯದ ಭಾಗದಲ್ಲಿ ಹೆಚ್ಚು ಕಡಿಮೆ ಅಡಗಿಸಲ್ಪಟ್ಟದ್ದಾಗಿರುವ ಅತಿ ಚಿಕ್ಕ ಪತ್ರಿಕೆಯೇ ಫಿಲೆಮೋನನಿಗೆ ಬರೆದ ಪತ್ರಿಕೆಯಾಗಿದೆ. ಕೇವಲ ಕ್ಲುಪ್ತವಾದ ಇಪ್ಪತ್ತೈದು ವಚನಗಳನ್ನಷ್ಟೆ ಹೊಂದಿರುವದಾಗಿದ್ದು, ಫಿಲೆಮೋನನಿಗೆ ಪುಸ್ತಕವು ಸುಲಭವಾಗಿ ಉದಾಸೀನಕ್ಕೆ ಮತ್ತು ನಿರ್ಲಕ್ಷಕ್ಕೆ ಒಳಗಾಗುತ್ತದೆ. ಈ ಪುಸ್ತಕದಲ್ಲಿ ಯಾವದೇ ದೊಡ್ಡ ಸಿದ್ಧಾಂತಿಕ ಚರ್ಚೆಯು ಮಾಡಲ್ಪಟ್ಟಿರುವದಿಲ್ಲ ಮತ್ತು ಒಂದೇ ಒಂದು ಉತ್ಕೃಷ್ಟವಾದ ಕಂಠಪಾಠ ಮಾಡಿಕೊಳ್ಳಬಹುದಾದ ವಚನವೂ ಇಲ್ಲ. ಬಹುಶಃ ಫಿಲೆಮೋನನಿಗೆ ಪತ್ರಿಕೆಯ ಕುರಿತು ಅತ್ಯಂಥ ಅಧಿಕ ಸಾರಿ ಕೇಳಲ್ಪಡುವ ಪ್ರಶ್ನೆಯೆಂದರೆ "ಅದು ಬೈಬಲ್‌ನಲ್ಲಿ ಇರುವ ಅವಶ್ಯಕತೆಯಾದರೂ ಏನಿದೆ?" ಹಾಗಿದ್ದರೂ, ಅದು ಈ ದಿನವೂ ಶಾಸ್ತ್ರಗಳಲ್ಲಿ ಒಂದು ಪ್ರಾಮುಖ್ಯವಾದ ಭಾಗವಾಗಿ ಮುಂದುವರೆದಿರುತ್ತದೆ, ಯಾಕೆಂದರೆ ಅದು ಕ್ರೈಸ್ತ ಮನವೊಪ್ಪಿಸುವಿಕೆಗೆ ಒಂದು ಮಾದರಿಯನ್ನು ಒದಗಿಸುತ್ತದೆ ಮತ್ತು ಯೇಸುವಿನ ಹಿಂಬಾಲಕರು ಒಬ್ಬರೊಬ್ಬರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದರ ಮೇಲೆ ಕ್ರೈಸ್ತ ನಂಬಿಕೆಯು ಬೀರುವ ನಾಟಕೀಯವಾದ ಪ್ರಭಾವವನ್ನು ತೋರ್ಪಡಿಸುತ್ತದೆ.

ಈ ಪತ್ರಿಕೆಯಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರವು ಸಿಕ್ಕದೆ ಹಾಗೆಯೇ ಉಳಿಯುತ್ತವೆ. ಫಿಲೆಮೋನ, ಅಪ್ಫಿಯಳು, ಮತ್ತು ಅರ್ಖಿಪ್ಪ ಇವರ ನಡುವಿನ ಸಂಬಂಧವೇನು? ಒನೇಸಿಮನು ಹೇಗೆ ಒಬ್ಬ ದಾಸನಾದನು? ಒನೇಸಿಮನು ಹಿಂದಿರುಗಿ ಬರುವ ಯಾವದೇ ಉದ್ದೇಶವಿಲ್ಲದವನಾಗಿ ಓಡಿ ಹೋದನೋ, ಅಥವಾ ಆತನು ಕೇವಲ ಪೌಲನ ಸಹಾಯವನ್ನಷ್ಟೆ ಹುಡುಕಿದನೋ? ಆತನು ಪೌಲನನ್ನು ಹೇಗೆ ಕಂಡುಕೊಂಡನು? ಫಿಲೆಮೋನ ಮತ್ತು ಒನೇಸಿಮನ ನಡುವಿನ ವೈಯಕ್ತಿಕ ಸಂಬಂಧವೇನಾಗಿತ್ತು? ಕ್ಲುಪ್ತವಾಗಿ ಹೇಳುವದಾದರೆ, ಈ ಪತ್ರಿಕೆಯ ಹಿನ್ನಲೆಯ ಕುರಿತು ನಮಗೆ ತಿಳಿಯದಂಥ ಬಹಳಷ್ಟು ಸಂಗತಿ ಇರುತ್ತದೆ.

ಹೇಗೂ, ಈ ಜಿಜ್ಞಾಸೆಯ ಕಥೆಯಲ್ಲಿನ ಮಹತ್ವಪೂರ್ಣವಾದ ಅಂಶಗಳು ಸ್ಪಷ್ಟವಾಗಿರುತ್ತವೆ. ಫಿಲೆಮೋನನು ಪೌಲನಿಂದ ಪರಿವರ್ತನೆಗೆ ನಡಿಸಲ್ಪಟ್ಟಂಥ ಒಬ್ಬ ದಾಸನ ಯಜಮಾನನಾಗಿದ್ದನು. ಫಿಲೆಮೋನನ ಸ್ವತ್ತಾಗಿದ್ದ ಒನೇಸಿಮನು ಒಬ್ಬ ದಾಸನಾಗಿದ್ದು, ಅವನು ಪೌಲನನ್ನು ಕಂಡುಕೊಳ್ಳುವದಕ್ಕೆ ಹೋಗಿದ್ದನು ಮತ್ತು ಅದೇ ರೀತಿಯಲ್ಲಿ ಪೌಲನಿಂದ ಪರಿವರ್ತಿಸಲ್ಪಟ್ಟಿದ್ದನು. ಆ ಸಂದರ್ಭದಲ್ಲಿ ಸೆರೆಯಲ್ಲಿದ್ದ ಪೌಲನು, ತನ್ನ ಯಜಮಾನನೊಂದಿಗೆ ಸಂಧಾನಪಡಿಸಿಕೊಳ್ಳುವಂತೆ ಒನೇಸಿಮನನ್ನು ಆತನ ಯಜಮಾನನ ಬಳಿಗೆ ಪುನಃ ಕಳುಹಿಸಿದನು. ಆತನು ಹಿಂದಿರುಗಿ ಹೋಗುವ ವೇಳೆ, ಒನೇಸಿಮನನ್ನು ಕರ್ತನಲ್ಲಿ ಒಬ್ಬ ಸಹೋದರನೆಂದು ನಡೆದುಕೊಳ್ಳುವಂತೆ ಫಿಲೆಮೋನನಿಗೆ ಪ್ರೋತ್ಸಾಹಿಸಿ ಪೌಲನ ಬರೆದ ಪತ್ರಿಕೆಯನ್ನು ತೆಗೆದುಕೊಂಡು ಹೊರಟಿದ್ದನು.

ಅಪೊಸ್ತಲನು, ದಾಸನ ಯಜಮಾನನು, ಮತ್ತು ದಾಸನು ಎಲ್ಲರು ಒಂದು ಹೊಸದಾದ ಮತ್ತು ಕಷ್ಟಕರವಾದ ಪರಿಸ್ಥಿತಿಗೆ ಸಿಲುಕಿರುತ್ತಾರೆ. ಅವರು ಯೇಸುವಿನೊಂದಿಗೆ ಹೊಂದಿದ್ದ ಸಂಬಂಧ ಮತ್ತು, ತತ್ಫರಿಣಾಮವಾಗಿ ಒಬ್ಬರೊಂದಿಗೊಬ್ಬರು ಹೊಂದಿದ್ದ ಸಂಬಂಧದ ಕಾರಣದಿಂದಾಗಿ ಅವರೆಲ್ಲಾ ಈ ಸೂಕ್ಷ್ಮವಾದ ವಿಷಯವನ್ನು ಆಳವಾದ ದೀನಭಾವದಿಂದ ಮತ್ತು ಒಬ್ಬರೊಬ್ಬರ ಬಗ್ಗೆ ಉನ್ನತ ಭಾವನೆಯನ್ನು ಹೊಂದಿದವರಾಗಿ ಪರಿಹರಿಸಿಕೊಳ್ಳಬೇಕಾದ ಅಗತ್ಯವಿತ್ತು. ಅಪೊಸ್ತಲನಾದ ಪೌಲನು ಫಿಲೆಮೋನನಿಗೆ ತನ್ನ ಪತ್ರಿಕೆಯನ್ನು ಬರೆಯುವ ವೇಳೆ ಈ ರೀತಿಯಾದ ಒಂದು ಸವಾಲು ಆತನ ಮುಂದಿತ್ತು. ಇಂದು ಪ್ರಪಂಚದ ಬಹಳಷ್ಟು ಭಾಗಗಳಲ್ಲಿ ದಾಸತ್ವದ ಸಮಸ್ಯೆಯು ಇಲ್ಲದಂತಾಗಿದೆ ಎಂಬುದಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಿರಬಲ್ಲೆವು, ಆದರೆ ನಮ್ಮ ಜೊತೆ ಕ್ರೈಸ್ತರನ್ನು ನಿಜವಾದ ಸಹೋದರರು ಹಾಗೂ ಸಹೋದರಿಯರೆಂದು ನಡಿಸಿಕೊಳ್ಳಬೇಕೆಂಬ ಹೋರಾಟವು ಈಗಲೂ ಕ್ರಿಸ್ತನ ಹಿಂಬಾಲಕರಿಗೆ ಒಂದು ಸವಾಲು ಆಗಿರುತ್ತದೆ. ಎಲ್ಲಿಯ ವರೆಗೆ ಪರಿಸ್ಥಿತಿಯು ಹೀಗಿರುತ್ತದೋ, ಫಿಲೆಮೋನನಿಗೆ ಪೌಲನು ಬರೆದ ಪತ್ರಿಕೆಯ ಇಪ್ಪತ್ತೈದು ವಚನಗಳು ಸಭೆಗೋಸ್ಕರ ಒಂದು ಅತ್ಯಂಥ ಪ್ರಾಮುಖ್ಯವಾದ ಉದ್ದೇಶಕ್ಕೆ ಸೇವೆ ಸಲ್ಲಿಸುತ್ತಿರುತ್ತವೆ.

## ಲೇಖಕ

ಈ ಪತ್ರಿಕೆಯ ಮೊದಲ ಮಾತುಗಳಲ್ಲಿ, ಲೇಖಕನು ತನ್ನನ್ನು "ಪೌಲ" ಎಂದು ಪರಿಚಯಿಸಿಕೊಳ್ಳುತ್ತಾನೆ. ಇದನ್ನು ಬರೆಯುವ ವೇಳೆ ಆತನು "ಕ್ರಿಸ್ತ ಯೇಸುವಿನ ಸೆರೆಯವನಾಗಿದ್ದನು" (ವ. 1) ಮಾತ್ರವಲ್ಲದೆ "ಮುದುಕನೂ . . . ಆಗಿರುವ ಪೌಲ" ಆಗಿದ್ದನು (ವ. 9). ಪತ್ರಿಕೆಯಲ್ಲಿನ ಪ್ರತಿಯೊಂದು ಸೂಚನೆಗಳು ಸಹ ಪೌಲನು ತನ್ನ ಜೀವಿತದ ಕಡೇ ವರ್ಷಗಳಲ್ಲಿ ತಾನು ಸೆರೆಮನೆಯಲ್ಲಿರುವ ವೇಳೆ ಈ ಪತ್ರಿಕೆಯನ್ನು ಬರೆದನೆಂಬದನ್ನು ತೋರಿಸುತ್ತವೆ. ಕೆಲವರು (ಉದಾಹರಣೆಗೆ Ferdinand Baur ಮತ್ತು ಹತ್ತೊಂಭತ್ತನೆಯ ಶತಮಾನದ Tübingen School) ಈ ಅಭಿಪ್ರಾಯಕ್ಕೆ ಆಕ್ಷೇಪಣೆಯನ್ನು ಮಾಡುತ್ತಾರಾದರೂ, "ಇಂದು ಫಿಲೆಮೋನನಿಗೆ ಬರೆದ ಪತ್ರಿಕೆಯ ಪ್ರಾಮಾಣ್ಯತೆಯು ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟಿರುತ್ತದೆ, ಯಾಕೆಂದರೆ ಅದನ್ನು ಪ್ರಶ್ನಿಸುವದಕ್ಕೆ ಯಾವ ಕಾರಣವೂ ಇರುವದಿಲ್ಲ."[1]

ಸಹ-ರವಾನೆಗಾರನಾದ, "ಸಹೋದರನಾದ ತಿಮೊಥೆ" (ವ. 1), ಸಹ ಹೆಸರಿಸಲ್ಪಟ್ಟಿದ್ದಾನೆ. ತಿಮೊಥೆಯು ಪೌಲನ ಯುವ ಸಹಾಯಕನಾಗಿದ್ದು ಅಪೊಸ್ತಲನ ಸಂಗಡ ಬಹಳವಾಗಿ ಪ್ರಯಾಣಿಸುತ್ತಿದ್ದನು, ಅನೇಕ ಸಾರಿ ಆತನ ಸಂದೇಶವಾಹಕನಾಗಿ ಸೇವೆ ಮಾಡುತ್ತಿದ್ದನು. ಆತನು ಪೌಲನ ಆರು ಪತ್ರಿಕೆಗಳಲ್ಲಿ ಸಹ – ರವಾನೆಗಾರನಾಗಿ ಹೆಸರಿಸಲ್ಪಟ್ಟಿದ್ದಾನೆ (2 ಕೊರಿಂಥದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, 1 ಥೆಸಲೋನಿಕ, 2 ಥೆಸಲೋನಿಕ, ಮತ್ತು ಫಿಲೆಮೋನನಿಗೆ). ಬಹುಶಃ "ಸಹ – ಲೇಖಕ" ಎಂಬುದಕ್ಕಿಂತಲೂ "ಸಹ-ರವಾನೆಗಾರ" ಎಂಬುದು ಹೆಚ್ಚು ನಿಖರವಾದ ಪದವಾಗಿರುವದು ಯಾಕೆಂದರೆ ಪತ್ರಿಕೆಯ ಹಿಂದಿರುವ ಅಧಿಕಾರವು ಪೌಲನಿಂದ ಬಂದದ್ದಾಗಿತ್ತು. 4ನೇ ವಚನದಲ್ಲಿ ಆರಂಭಗೊಂಡು, ಪೌಲನು ಬಹುವಚನ ಸರ್ವನಾಮಗಳನ್ನು ("ನಾವು" ಮತ್ತು "ನಮ್ಮ")

ಎಂಬುದಕ್ಕೆ ಬದಲಾಗಿ ಉತ್ತಮ ಪುರುಷ ಏಕವಚನಗಳನ್ನು ("ನಾನು" ಮತ್ತು "ನನಗೆ") ಎಂದು ಬಳಸುತ್ತಾನೆ. ಸಂಬೋಧನೆಯಲ್ಲಿ ಪೌಲನ ಜೊತೆಯಾಗಿ ತಿಮೊಥೆಯು ಸಹ ಹೆಸರಿಸಲ್ಪಟ್ಟಿದ್ದಾನಾದರೂ, ಈ ಪತ್ರಿಕೆಯು ಓದಲ್ಪಟ್ಟಾಗ ಫಿಲೆಮೋನನು ಕೇಳಿಸಿಕೊಂಡದ್ದು ಪೌಲನ "ಸ್ವರ"ವೇ ಆಗಿತ್ತು.

## ಸ್ವೀಕರಿಸಿಕೊಳ್ಳುವವರು

ಈ ಪತ್ರಿಕೆಯು "ಪ್ರಿಯನೂ ಜೊತೆಗೆಲಸದವನೂ ಆಗಿರುವ ಫಿಲೆಮೋನನೆಂಬ ನಿನಗೂ ಸಹೋದರಿಯಾದ ಅಪ್ಫಿಯಳಿಗೂ ನಮ್ಮ ಸಹಭಟನಾದ ಅರ್ಖಿಪ್ಪನಿಗೂ ನಿನ್ನ ಮನೆಯಲ್ಲಿ ಕೂಡುವ ಸಭೆಯವರಿಗೂ" ಸಂಬೋಧಿಸಿ ಬರೆದದ್ದಾಗಿದೆ (ವಚನಗಳು 1, 2). ಈ ಸಂಬೋಧನೆಯಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ವಿಶೇಷ ಗಮನವನ್ನು ಹೊಂದಿರುತ್ತಾನೆ.

*ಫಿಲೆಮೋನ.* ನಮಗೆ ಆತನ ಹೆಸರನ್ನು ಹೊಂದಿರುವ ಹೊಸ ಒಡಂಬಡಿಕೆಯಲ್ಲಿನ ಪತ್ರಿಕೆಯಿಂದ ಮಾತ್ರವೇ ಪರಿಚಿತನಿರುವವನಾಗಿದ್ದು, ಫಿಲೆಮೋನನು ಒಬ್ಬ ದಾಸನ-ಯಜಮಾನನಾಗಿದ್ದು ಪೌಲನ ಸೇವೆಯ ಮೂಲಕ ಕ್ರೈಸ್ತನಾದವನು. ಆತನು ಕೊಲೊಸ್ಸೆಯಲ್ಲಿನ ಸಭೆಯ ಒಬ್ಬ ಸದಸ್ಯನಾಗಿದ್ದನೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ ಮತ್ತು ಆತನೊಬ್ಬ ಐಶ್ವರ್ಯವಂತ ವ್ಯಕ್ತಿಯಾಗಿದ್ದನು (ತನ್ನ ಮನೆಯಲ್ಲಿ ಸಭೆಯು ಕೂಡುವದಕ್ಕೆ ಅವಕಾಶ ಕೊಟ್ಟಿದ್ದ ದಾಸನ-ಯಜಮಾನ). ಪೌಲನು ಆತನನ್ನು ಕೋಮಲವಾದ ಪದಗಳಲ್ಲಿ ಬಣ್ಣಿಸುತ್ತಾನೆ: "ಪ್ರಿಯ ಸಹೋದರ" (ವ. 1), "ಸಹೋದರ" (ವಚನಗಳು 7, 20), ಮತ್ತು "ಜೊತೆಗಾರ" (ವ. 17). ಪೌಲನು ಆತನಿಗೆ ನೇರವಾಗಿ ಸೆರೆಮನೆಯಲ್ಲಿ ಉಪದೇಶಿಸಿದ್ದನೋ ಅಥವಾ ಪರೋಕ್ಷವಾಗಿ ಉಪದೇಶಿಸಿದ್ದನೋ ಎಂಬುದು ಸ್ಪಷ್ಟವಾಗಿರುವದಿಲ್ಲ, ಬಹುಶಃ ಎಪಫ್ರನ ಸೇವೆಯ ಮೂಲಕ ಆಗಿರಬಹುದಾಗಿದೆ (ಕೊಲೊಸ್ಸೆ 1:7). ವಿಷಯ ಏನೇ ಇದ್ದರೂ ಸರಿಯೇ, ಪೌಲನು ಹೆಮ್ಮೆಯಿಂದ ಫಿಲೆಮೋನನಿಗೆ ಹೀಗೆ ಜ್ಞಾಪಕ ಪಡಿಸುತ್ತಾನೆ, "ನಿನ್ನ ಆತ್ಮದ ವಿಷಯದಲ್ಲಿ ನೀನೇ ನನ್ನ ಸಾಲದಲ್ಲಿದ್ದೀ" (ವ. 19). ಹೆಚ್ಚು ಕಾಲ ಕಳೆದಂತೆ, ಫಿಲೆಮೋನನು ದೇವರ ರಾಜ್ಯದಲ್ಲಿ ಪೌಲನ "ಜೊತೆಗೆಲಸದವನು" ಎಂದು ಪರಿಚಿತಗೊಂಡಿದ್ದನು (ವ. 1). ಈ ಮಾತು ಪುನಃ 24ನೇ ವಚನದಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಎಪಫ್ರ, ಮಾರ್ಕ, ಅರಿಸ್ತಾರ್ಕ, ದೇಮ, ಮತ್ತು ಲೂಕ ಇವರನ್ನು ಬಣ್ಣಿಸುತ್ತದೆ. ಈ ಪದದ ಬಳಕೆಯು ದೇವರು ಗೊತ್ತುಪಡಿಸಿದ ಕೆಲಸದಲ್ಲಿ ಫಿಲೆಮೋನನನ್ನು ಪೌಲನು ಜೊತೆಕೆಲಸಗಾರನೆಂದು ಪರಿಗಣಿಸಿದ್ದನು ಎಂಬುದನ್ನು ತೋರಿಸುತ್ತದೆ. ಇದರರ್ಥವು ಅವರು ಯಾವದೋ ಒಂದು ಸಮಯದಲ್ಲಿ ಜೊತೆಜೊತೆಯಾಗಿ ಕೆಲಸ ಮಾಡಿದ್ದರೆಂದೋ ಅಥವಾ ಅಂತಿಮವಾಗಿ ಒಂದೇ ಉದ್ದೇಶಕ್ಕೋಸ್ಕರ ಅವರು ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರೋ ಎಂಬುದನ್ನು ನಾವು ನಿರ್ಧರಿಸುವದಕ್ಕೆ ಸಾಧ್ಯವಿಲ್ಲ.

*ಅಪ್ಫೀಯಳು.* ಪೌಲನು ಈ ಕ್ರೈಸ್ತ ಸ್ತ್ರೀಯನ್ನು ಕೇವಲ "ಸಹೋದರಿಯಾದ" ಎಂದಷ್ಟೆ ಹೇಳಿದನು (ವ. 2). ಆಕೆಯು ಬಹುಶಃ ಫಿಲೆಮೋನನ ಹೆಂಡತಿ ಅಥವಾ ಸಹೋದರಿಯಾಗಿದ್ದಿರಬಹುದು. ಎರಡರಲ್ಲಿ ಏನೇ ಆಗಿದ್ದರೂ, ಆಕೆಯು ಫಿಲೆಮೋನನ ಮನೆಯವರಲ್ಲಿ ಪ್ರಭಾವಿತ ಮಹಿಳಾ ಸದಸ್ಯಳಂತೂ ಆಗಿದ್ದಿರಬೇಕು.

*ಅರ್ಖಿಪ್ಪ.* ಈ ವ್ಯಕ್ತಿಯು "ನಮ್ಮ [ಪೌಲ ಮತ್ತು ತಿಮೋಥೆಯರ] ಸಹಭಟ" ಎಂದು ಗುರುತಿಸಲ್ಪಟ್ಟಿರುತ್ತಾನೆ (ವ. 2), ಇದು ಫಿಲಿಪ್ಪಿ 2:25ರಲ್ಲಿ ಪೌಲನು ಎಪಫ್ರನಿಗೆ ಅನ್ವಯಿಸಿದ ಮಾತಾಗಿರುತ್ತದೆ. ಕೊಲೊಸ್ಸೆ 4:17ರಲ್ಲಿ ಪೌಲನು ಅರ್ಖಿಪ್ಪನ ಕುರಿತಾಗಿ ಈ ಕೆಳಗಿನ ನಿಗೂಢವಾದ ಅಪ್ಪಣೆಗಳನ್ನು ಬರೆಯುತ್ತಾನೆ: "ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೇರವೇರಿಸುವದಕ್ಕೆ ಎಚ್ಚರವಾಗಿರಬೇಕು." ಆತನು ಸಂಭಾವ್ಯವಾಗಿ ಫಿಲೆಮೋನ ಹಾಗೂ ಅಪ್ಫಿಯಳ ಸಹೋದರನಾಗಿರಬಹುದು ಅಥವಾ ಅವರ ಮಗನಾಗಿರಬಹುದಾಗಿದೆ.

*ನಿಮ್ಮ ಮನೆಯಲ್ಲಿ ಕೂಡುವ ಸಭೆ.* ಇಂದು ಸಭೆಗಳು ನಿರ್ದಿಷ್ಟವಾದ ಉದ್ದೇಶಕ್ಕಾಗಿಯೇ ಇರುವಂಥ ಕಟ್ಟಡಗಳಲ್ಲಿ ಸೇರಿ ಬರುತ್ತವೆ. ಹೇಗೂ, ಮೊದಲನೆಯ ಶತಮಾನದಲ್ಲಿ, ಸಬೆಗಳು ಸಾಮಾನ್ಯವಾಗಿ ಮನೆಗಳಲ್ಲಿ ಕೂಡಿ ಬರುತ್ತಿದ್ದವು (ಅಪೊಸ್ತಲರ ಕೃತ್ಯಗಳು 2:46; 5:42). ಅಂಥ ಪರಿಸ್ಥಿತಿಗಳಲ್ಲಿ, ಸಭೆಯು ಕೂಡಿ ಬರುವಷ್ಟು ದೊಡ್ಡದಾದ ಮನೆಯನ್ನು ಹೊಂದಿರುತ್ತಿದ್ದ ಕ್ರೈಸ್ತನೊಬ್ಬನು ಸಭೆಯ ಆಥಿತ್ಯವನ್ನು ವಹಿಸಿಕೊಳ್ಳುತ್ತಿದ್ದನು. ಪ್ರಿಸ್ಕಳು ಮತ್ತು ಅಕ್ವಿಲ (ರೋಮಾ 16:3-5; 1 ಕೊರಿಂಥ 16:19) ಮತ್ತು ನುಂಫಳು (ಕೊಲೊಸ್ಸೆ 4:15) ಇವರು ಇದಕ್ಕೆ ಉದಾಹರಣೆಗಳಾಗಿದ್ದಾರೆ. ಪೌಲನು ತನ್ನ ಪತ್ರಿಕೆಯ ವಂದನೆಯ ಭಾಗದಲ್ಲಿ ಗೃಹ ಸಭೆಯೊಂದನ್ನು ಹೆಸರಿಸಿದ ಏಕೈಕ ನಿದರ್ಶನವು ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿನ ಆತನ ಸಂಬೋಧನೆಯು ಮಾತ್ರವೇ ಆಗಿರುತ್ತದೆ.

2ನೇ ವಚನದಲ್ಲಿ "ನಿನ್ನ" ಎಂಬುದು ಏಕವಚನದಲ್ಲಿರುತ್ತದೆ ಮತ್ತು ಫಿಲೆಮೋನನನ್ನು ಸೂಚಿಸುತ್ತದೆ (ಪಟ್ಟಿಯಲ್ಲಿರುವ ಮೊದಲ ವ್ಯಕ್ತಿ ಮತ್ತು ಈ ಪತ್ರಿಕೆಯ ಮುಖ್ಯವಾದ ಕೇಂದ್ರಬಿಂದು). ಹೇಗೂ, ಅಲ್ಲಿ ಅರ್ಖಿಪ್ಪನು (ಸರ್ವನಾಮದ ಮುಂಚೆ ಪಟ್ಟಿಯಲ್ಲಿರುವ ಕಡೇ ವ್ಯಕ್ತಿ) ಎಂಬ ಅರ್ಥ ಸಹ ಆಗಿರಬಹುದೆಂಬದ ಸಾಧ್ಯತೆಗೆ ಪರಿಭಾಷೆಯು ಅವಕಾಶವನ್ನು ತೆರೆದಿಡುತ್ತದೆ. ಈ ಸಂಬೋಧನೆಯನ್ನು ಎಷ್ಟು ಅಕ್ಷರಶಃ ಅರ್ಥೈಸಿಕೊಳ್ಳಬೇಕೆಂಬದು ಪೌಲನ ಇಂಗಿತವಾಗಿತ್ತೆಂಬುದು ಹೆಚ್ಚು ಪ್ರಾಮುಖ್ಯವಾದ ಪ್ರಶ್ನೆಯಾಗಿರುತ್ತದೆ.

F. F. Bruceನ ಅಭಿಪ್ರಾಯದಲ್ಲಿ, ಅಂಥ ವೈಯಕ್ತಿಕ ಪ್ರಶ್ನೆಯನ್ನು ಇಡೀ ಸಭೆಯ ಸಮ್ಮುಖದಲ್ಲಿ ಚರ್ಚಿಸುವದು ಸ್ವಾರ್ಥಕ್ಕಾಗಿ ಬಳಸಿಕೊಂಡಂತೆಯೂ ದಬ್ಬಾಳಿಕೆಯಂತೆಯೂ ಆಗುತ್ತಿತ್ತು. Bruceನು ಹೀಗೆ ಒತ್ತಿ ಹೇಳುತ್ತಾನೆ, "ಪತ್ರಿಕೆಯು ಖಾಸಗಿಯಾದದ್ದು, ಕೇವಲ ಫಿಲೆಮೋನನಿಗಾಗಿ ಎಂದೇ ಬರೆಯಲ್ಪಟ್ಟಿತ್ತು."[2] ಹೇಗೂ, ಸಭೆಯಲ್ಲಿನ ಸಕಾರಾತ್ಮಕವಾದ ಎಲ್ಲರಂತಿರಬೇಕೆಂಬ ಒತ್ತಡವೇ ಸರಿಯಾಗಿ ಪೌಲನ ಮನಸ್ಸಿನಲ್ಲಿಯೂ ಇತ್ತೆಂಬದಾಗಿ ಇನ್ನು ಕೆಲವರು ಪರಿಗಣಿಸುತ್ತಾರೆ.[3] ಫಿಲೆಮೋನನ ಮನೆಯವರಲ್ಲಿ ಇತರ ಸದಸ್ಯರು (ಅಪ್ಫಿಯ ಮತ್ತು ಅರ್ಖಿಪ್ಪ) ಮಾತ್ರವೇ ಚರ್ಚೆಯಲ್ಲಿ ತರಲ್ಪಡಲಿಲ್ಲ, ಆದರೆ ಫಿಲೆಮೋನನ ಮನೆಯಲ್ಲಿ ಕೂಡಿ ಬರುತ್ತಿದ್ದ ಇಡೀ ಸಭೆಯು ಸಹ ಆಮಂತ್ರಿಸಲ್ಪಟ್ಟಿತು. ಅವರೆಲ್ಲರು ಒಟ್ಟಾಗಿ ಕ್ರಿಸ್ತನ ಹೆಸರಿನಲ್ಲಿ ಕ್ರೈಸ್ತ ದಾಸರು ಮತ್ತು ಕ್ರೈಸ್ತ ದಾಸರ-ಯಜಮಾನರು ಒಬ್ಬರೊಂದಿಗೊಬ್ಬರು ಹೇಗೆ ನಡೆದುಕೊಳ್ಳಬೇಕೆಂಬ ಕಷ್ಟಕರವಾದ ವಿವಾದಾಂಶದ ಬಗ್ಗೆ ಅವರಿಗಿರುವ ನಂಬಿಕೆಯ ಸೂಚಿತ ಪರಿಣಾಮಗಳ ಬಗ್ಗೆ ಆಲೋಚನೆಯನ್ನು ನಡಿಸಬೇಕಿತ್ತು.

ಆರಂಭದಲ್ಲಿ ಒಂದು ಖಾಸಗಿಯಾದ ವಿವಾದಾಂಶವೆಂದು ಕಂಡದ್ದರ ವಿಷಯವಾಗಿ ಇಡೀ ಸಭೆಯ ಭಾಗಿಯಾಗುವದು ಫಿಲೆಮೋನನಿಗೆ ಬರೆದ ಪತ್ರಿಕೆಯ ಅತ್ಯಂಥ

ಗಮನಾರ್ಹವಾದ ಸಂಗತಿಯಾಗಿರುತ್ತದೆ.ಕ್ರೈಸ್ತ ನಂಬಿಕೆಯು ವೈಯಕ್ತಿಕವಾದದ್ದು, ಆದರೆ ಅದು ಖಾಸಗಿಯಾದದ್ದಲ್ಲ. ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯು ಕೊಲೊಸ್ಸೆಯ ಸಭೆಯಲ್ಲಿ ಓದಲ್ಪಟ್ಟಾಗ ಫಿಲೆಮೋನನು ಈ ಕಾರ್ಯವನ್ನು ಕಲಿತುಕೊಂಡಿರಬಹುದಾಗಿದೆ! ಹಾಗಾದರೆ, ಫಿಲೆಮೋನನಿಗೆ ಬರೆದ ಪತ್ರಿಕೆಯು, ಒಂದು ಸಾರ್ವಜನಿಕ ಖಾಸಗಿ ಪತ್ರಿಕೆಯೇ ಆಗಿರುತ್ತದೆ.

## ಫಿಲೆಮೋನನಿಗೆ ಬರೆದ ಪತ್ರಿಕೆ ಮತ್ತು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆ

ಫಿಲೆಮೋನನಿಗೆ ಮತ್ತು ಕೊಲೊಸ್ಸೆಯವರಿಗೆ ಪೌಲನು ಬರೆದ ಪತ್ರಿಕೆಗಳು ಒಂದೇ ಸಮಯದಲ್ಲಿ ಒಂದೇ ಪಟ್ಟಣದ ಜನರಿಗೋಸ್ಕರ ಬರೆಯಲ್ಪಟ್ಟಿರುವಂತೆ ಮತ್ತು ಒಬ್ಬನೇ ಒಲೆಕಾರನಿಂದ ತಲುಪಿಸಲ್ಪಟ್ಟಿರುತ್ತವೆಂದು ತೋರುತ್ತದೆ. ಎರಡು ಪತ್ರಿಕೆಗಳಲ್ಲಿ ಹಲವಾರು ಹೆಸರುಗಳನ್ನು ಹಂಚಿಕೊಳ್ಳಲಾಗಿದೆ:

| ವ್ಯಕ್ತಿ | ಕೊಲೊಸ್ಸೆ | ಫಿಲೆಮೋನನಿಗೆ |
|---|---|---|
| ಎಪಫ್ರ | 1:7; 4:12 | v. 23 |
| ಒನೇಸಿಮ | 4:9 | v. 10 |
| ಅರಿಸ್ತಾರ್ಕ | 4:10 | v. 24 |
| ಮಾರ್ಕ | 4:10 | v. 24 |
| ಲೂಕ | 4:14 | v. 24 |
| ದೇಮ | 4:14 | v. 24 |

ಎರಡೂ ಪತ್ರಿಕೆಗಳ ನಡುವಿನ ಅತ್ಯಂಥ ಬಲವಾದ ಸಂಬಂಧವು ಕೊಲೊಸ್ಸೆ 4:7–9ರಲ್ಲಿ ಸಿಕ್ಕುತ್ತದೆ:

> ಪ್ರಿಯ ಸಹೋದರರನೂ ನಂಬಿಗಸ್ತನಾದ ಸೇವಕನೂ ಕರ್ತನಲ್ಲಿ ಜೊತೆ ದಾಸನೂ ಆಗಿರುವ ತುಖಿಕನು ನನ್ನ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು. ನೀವು ನನ್ನ ಸಮಾಚಾರವನ್ನು ತಿಳುಕೊಳ್ಳುವ ಹಾಗೆಯೂ ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ ಅವನನ್ನು ನಂಬಿಗಸ್ತನಾದ ಪ್ರಿಯ ಸಹೋದರನಾಗಿರುವ *ನಿಮ್ಮ ಊರಿನ ಒನೇಸಿಮನ* ಜೊತೆಯಲ್ಲಿ ಕಳುಹಿಸಿದ್ದೇನೆ. ಅವನು ಇಲ್ಲಿ ನಡೆಯುವ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು. (ಒತ್ತಿ ಹೇಳಿದ್ದು ನನ್ನದು.)

ಒಟ್ಟಾಗಿ ತೆಗೆದುಕೊಂಡು ನೋಡುವದಾದರೆ, ಪೌಲನು ಇಡೀ ಸಭೆಗೆ ಸಂಬೋಧಿಸಿ ಬರೆದ ಮತ್ತು ಕೊಲೊಸ್ಸೆಯಲ್ಲಿನ ಸಭೆಯ ಒಬ್ಬ ಸದಸ್ಯನಾಗಿದ್ದ ಫಿಲೆಮೋನನಿಗೇ ಪ್ರತ್ಯೇಕವಾಗಿ ಬರೆದಿದ್ದ ಇನ್ನೊಂದು ಪತ್ರಿಕೆ, ಹೀಗೆ ಎರಡು ಪತ್ರಿಕೆಗಳನ್ನು ಕೊಟ್ಟು ತುಖಿಕ ಮತ್ತು ಒನೇಸಿಮರನ್ನು ಒಟ್ಟಿಗೆ ಕಳುಹಿಸಿದ್ದನು ಎಂಬುದಕ್ಕೆ ಪುರಾವೆಯು ಇರುವಂತೆ ಕಂಡು ಬರುತ್ತದೆ.

# ಬರೆದ ದಿನಾಂಕ ಮತ್ತು ಸ್ಥಳ

ಫಿಲೆಮೋನನಿಗೆ ಬರೆದ ಪತ್ರಿಕೆ ಮತ್ತು ಎಫೆಸದವರಿಗೆ, ಫಿಲಿಪ್ಪಿಯವರಿಗೆ, ಮತ್ತು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಗಳು ದೀರ್ಘಕಾಲದಿಂದಲೂ “ಸೆರೆಮನೆಯಲ್ಲಿ ಬರೆದ ಪತ್ರಿಕೆಗಳು” ಎಂದು ಕರೆಯಲ್ಪಟ್ಟಿರುತ್ತವೆ. ಪೌಲನು ಫಿಲೆಮೋನನಿಗೆ ಬರೆಯುವ ವೇಳೆ ಸೆರೆಮನೆಯಲ್ಲಿದ್ದನೆಂಬುದು ನಿರ್ವಿವಾದವಾದದ್ದು ಯಾಕೆಂದರೆ ಅದಕ್ಕೆ ವ್ಯಾಪಕವಾದ ಆಂತರಿಕ ಪುರಾವೆ ಇರುತ್ತದೆ (ವಚನಗಳು 1, 9, 10, 13, 23). ಸಂಪ್ರದಾಯಿಕವಾಗಿ ಇರುವಂಥ ನಿಲುವು ಏನೆಂದರೆ ನಾಲ್ಕು ಪತ್ರಿಕೆಗಳೆಲ್ಲವೂ ಅಪೊಸ್ತಲರ ಕೃತ್ಯಗಳು 28:30, 31ರಲ್ಲಿ ವಿವರಿಸಲಾಗಿರುವ ಸೆರೆವಾಸದ ವೇಳೆಯಲ್ಲಿ ರೋಮಾಪುರದಿಂದ ಪೌಲನು ಬರೆದನು ಎಂಬದೆ. ಇದುವೇ ನಿಜವಾಗಿದ್ದಲ್ಲಿ, ಫಿಲೆಮೋನನಿಗೆ ಪತ್ರಿಕೆಯು ಸುಮಾರು ಕ್ರಿ.ಶ 60ರಿಂದ 62 ಮಧ್ಯದಲ್ಲಿ, ಕೈಸರನಿಗೆ ಮನವಿಯನ್ನು ಸಲ್ಲಿಸಲು ಕಾಯುವವನಾಗಿ, ಗೃಹ ಬಂಧನದಲ್ಲಿರುವ ವೇಳೆ ಬರೆದನು ಎಂದಾಗುತ್ತದೆ.

ರೋಮಾಪುರದಿಂದ ಕೊಲೊಸ್ಸೆಗೆ ಅಂತರವು ಒಂದು ಸಾವಿರ ಮೈಲುಗಳಷ್ಟು ಇರುವದರ ಕಾರಣದಿಂದ, ಒನೇಸಿಮನು ಅಷ್ಟೊಂದು ದೀರ್ಘವಾದ ಪ್ರಯಾಣವನ್ನು ನಿರ್ವಹಿಸಿರುವದಕ್ಕೆ ಶಕ್ತನಾಗಿದ್ದರ ಬಗ್ಗೆ ವ್ಯಾಖ್ಯಾನಕಾರರು ಸಂಶಯ ವ್ಯಕ್ತಪಡಿಸುತ್ತಾರೆ. ರೋಮಾಪುರದ ಬದಲಾಗಿ, ಅವರು ಕೈಸರೈ ಅಥವಾ ಎಫೆಸ ಇರಬಹುದೆಂದು ಅವರು ಸಲಹೆ ಮಾಡುತ್ತಾರೆ. ಪೌಲನು ಕೈಸರೈದಲ್ಲಿ ಅನುಭವಿಸಿದ ಸೆರೆವಾಸದ ಬಗ್ಗೆ ಅಪೊಸ್ತಲರ ಕೃತ್ಯಗಳು 23:31-27:1ರಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ ಮತ್ತು ಅದು ಸುಮಾರು ಕ್ರಿ.ಶ. 57-59ರ ವೇಳೆಯಲ್ಲಿ ಸಂಭವಿಸಿತು. ಎಫೆಸದಲ್ಲಿನ ಸೆರೆವಾಸದ ಬಗ್ಗೆ ನಿರ್ದಿಷ್ಟವಾಗಿ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ ಆದರೆ ಅದು ಸುಮಾರು ಕ್ರಿ.ಶ. 52-54ರಲ್ಲಿ ಸಂಭವಿಸಿರಬಹುದಾಗಿದೆ.

ಎಫೆಸವನ್ನು ತಲುಪಬೇಕಾದರೆ ಒನೇಸಿಮನಿಗೆ ಒಂದು ವಾರಕ್ಕಿಂತ ಕಡಿಮೆ ಪ್ರಯಾಣ ಮಾಡುವ ಅಗತ್ಯವಿರುತ್ತಿದ್ದರೆ, ಕೈಸರೈಗೆ ಹೋಗುವದಕ್ಕೆ ಅದಕ್ಕಿಂತಲೂ ಹೆಚ್ಚು ಕಾಲ ಪ್ರಯಾಣದ ಅಗತ್ಯತೆಯಿರುತ್ತಿತ್ತು. ಹೇಗೂ, ರೋಮಾಪುರಕ್ಕೆ ಪ್ರಯಾಣಿಸಬೇಕೆಂದರೆ ಎಷ್ಟೋ ಹೆಚ್ಚಾದ ಸಮಯ ಹಾಗೂ ಬಹಳಷ್ಟು ಮೊತ್ತದ ಹಣದ ಅಗತ್ಯತೆಯಿರುತ್ತಿತ್ತು. ಅಲ್ಲದೆ ರೋಮಾಪುರವು, ಅದರ ಬೃಹತ್ ಗಾತ್ರದ ಕಾರಣದಿಂದಾಗಿ, ಒನೇಸಿಮನು ಅಲ್ಲಿಗೆ ತಲುಪಿದ ತಕ್ಷಣ ಪೌಲನನ್ನು ಕಂಡು ಹಿಡಿಯುವದಕ್ಕೆ ಸಾಕಷ್ಟು ಸವಾಲನ್ನು ಎದುರಿಸಬೇಕಾಗಿರುತ್ತಿತ್ತು. ಹೇಗೂ, ರೋಮಾಪುರವು ಬಹಳ ದೂರದ ಮತ್ತು ದೊಡ್ಡ ನಗರವಾಗಿದ್ದ ಕಾರಣಗಳಿಗಾಗಿಯೇ ಒನೇಸಿಮನು ಅಲ್ಲಿಗೆ ಹೋಗಿರಬಹುದು. ರೋಮಾಪುರವು ಕೊಲೊಸ್ಸೆಯಿಂದ ಸಾಕಷ್ಟು ದೂರದಲ್ಲಿತ್ತು ಮತ್ತು ಒಬ್ಬ ಓಡಿ ಬಂದಿರುವ ದಾಸನಿಗೆ ಆತನು ಹತಾಶೆಯಿಂದ ಹುಡುಕುತ್ತಿದ್ದ ಅಜ್ಞಾತವಾಗಿ ಉಳಿಯುವ ಸಂದರ್ಭವನ್ನು ಒದಗಿಸುವದಾಗಿತ್ತು.

ಪೌಲನು ಈ ಪತ್ರಿಕೆಯನ್ನು ಫಿಲೆಮೋನನಿಗೆ ಎಫೆಸ ಅಥವಾ ಕೈಸರೈದಲ್ಲಿದ್ದುಕೊಂಡು ಬರೆದನೆಂಬುದಕ್ಕೆ ನ್ಯಾಯಯುತವಾದ ಪುರಾವೆಯನ್ನು ಕೊಡಬಹುದಾದರೂ, ಪತ್ರಿಕೆಯು ಕ್ರಿ.ಶ. 60ರ ವೇಳೆಯಲ್ಲಿ ರೋಮಾಪುರದಿಂದ ಬರೆಯಲ್ಪಟ್ಟಿತು ಎಂಬ ದೃಷ್ಟಿಕೋನ ದೊಂದಿಗೆ ವ್ಯಾಖ್ಯಾನ ಗ್ರಂಥವು ಬರೆಯಲ್ಪಟ್ಟಿದೆ. ಈ ಪತ್ರಿಕೆಯ ವ್ಯಾಖ್ಯಾನವು ರಚಿಸಲ್ಪಟ್ಟ

ದಿನಾಂಕದ ಮೇಲಾಗಲಿ ಅಥವಾ ಬರೆಯುವ ವೇಳೆ ಪೌಲನು ಯಾವ ಸ್ಥಳದಲ್ಲಿ ಸೆರೆಯಲ್ಲಿದ್ದನೆಂಬದರ ಮೇಲಾಗಲಿ ಅಷ್ಟಾಗಿ ಅವಲಂಬಿಸಿರುವದಿಲ್ಲ. ಒನೇಸಿಮನು ಪೌಲನನ್ನು ರೋಮಾಪುರದಲ್ಲಿ, ಕೈಸರೈ, ಅಥವಾ ಎಫೆಸದಲ್ಲಿ ಕಂಡುಕೊಂಡನೋ ಎಂಬುದು ಒನೇಸಿಮನು ಮೊದಲನೆಯ ಶತಮಾನದ ಮಧ್ಯಭಾಗದ ಯಾವದೋ ಒಂದು ಸಮಯದಲ್ಲಿ ಕೊಲೊಸ್ಸೆಗೆ ತಲುಪಿ ತನ್ನ ಯಜಮಾನನ ಕೈಗೆ ಒಪ್ಪಿಸಿದ ಶಕ್ತಿಶಾಲಿ ಸಂದೇಶದ ಮೇಲೆ ಅಷ್ಟೇನೂ ಪರಿಣಾಮ ಬೀರುವದಿಲ್ಲ.

## ಕ್ರಿ.ಶ. ಮೊದಲನೆಯ ಶತಮಾನದಲ್ಲಿ ದಾಸತ್ವ

ಮೊದಲ ಶತಮಾನದ ರೋಮನ್ ಸಂಸ್ಕೃತಿಯು ಗುಲಾಮಗಿರಿಯದ್ದಾಗಿತ್ತು. ಆ ದಿನ ಮಹಾ ನಗರಗಳಲ್ಲಿ, ಒಟ್ಟು ಜನಸಂಖ್ಯೆಯಲ್ಲಿ ದಾಸರ ಸಂಖ್ಯೆಯು ಮೂರನೆಯ ಒಂದು ಭಾಗಕ್ಕಿಂತಲೂ ಅಧಿಕವಾಗಿರುತ್ತಿತ್ತು. ಒಬ್ಬ ವ್ಯಕ್ತಿಯು ಈ ಕೆಳಗಿನವುಗಳೊಳಗೆ ಒಂದು ವಿಧದಲ್ಲಿ ದಾಸನಾಗುತ್ತಿದ್ದನು: (1) ಯುದ್ಧದಲ್ಲಿ ಅಪಜಯ, (2) ಕಡಲುಗಳ್ಳರಿಂದ ಸೆರೆ ಹಿಡಿಯಲ್ಪಡುವದು, (3) ಸಾಲವನ್ನು ತೀರಿಸುವದಕ್ಕಾಗಿ ಸ್ವತಃ ಮಾರಿಕೊಳ್ಳುವದು, (4) ಸಾಲದ ನಿಮಿತ್ತ ನ್ಯಾಯಾಲವೊಂದರಿಂದ ತೀರ್ಪಾಗುವದು, (5) ಸಾಯುವದಕ್ಕೆ ಬಿಟ್ಟ ಒಂದು ತಿರಸ್ಕರಿಸಲ್ಪಟ್ಟ ಮಗು, (6) ಒಬ್ಬ ದಾಸಿ ತಾಯಿಗೆ ಹುಟ್ಟಿದ ಒಂದು ಮಗು.[4] ಮೊದಲನೆಯ ಶತಮಾನದ ಬಹುಪಾಲು ದಾಸರು ದಾಸತ್ವದಲ್ಲಿಯೇ ಹುಟ್ಟಿದ್ದರು. ಅನೇಕರಿಗೆ ಒಬ್ಬ ದಾಸನ-ಯಜಮಾನನು ತಂದೆಯಾಗಿರುತ್ತಿದ್ದನು ಮತ್ತು ಒಬ್ಬ ದಾಸಿ ತಾಯಿಗೆ ಹುಟ್ಟಿರುತ್ತಿದ್ದರು.

ದಾಸನ-ಯಜಮಾನನು ಹೇಗೆ ನಡೆದುಕೊಳ್ಳುತ್ತಿದ್ದನೆಂಬದರ ಮೇಲೆ ಒಬ್ಬ ದಾಸ ಜೀವನದ ಗುಣಮಟ್ಟವು ಆಧಾರವಾಗಿರುತ್ತಿತ್ತು. ರೋಮನ್ ಕಾನೂನಿನ ಪ್ರಕಾರ, ದಾಸರನ್ನು ಮಾನವ ಜೀವಿಗಳೆಂದು ಪರಿಗಣಿಸಲಾಗುತ್ತಿತ್ತು ಆದರೆ “ಕಾನೂನು ವ್ಯಕ್ತಿಗಳು” ಎಂದು ಪರಿಗಣಿಸಲ್ಪಡುತ್ತಿರಲಿಲ್ಲ. ಕಾನೂನಾತ್ಮಕವಾಗಿ ದಾಸರಿಗೆ ಮದುವೆಗಳು, ಕುಟುಂಬಗಳು, ಅಥವಾ ಬಾಧ್ಯತೆಗಳು ಇರುತ್ತಿರಲಿಲ್ಲ. ಅವರು ನ್ಯಾಯಾಲಯಗಳಲ್ಲಿ ತಮ್ಮನ್ನು ಪ್ರತಿನಿಧಿಸಿಕೊಳ್ಳಲು ಸಾಧ್ಯವಿರಲಿಲ್ಲ ಮತ್ತು ಅಪರಾಧ ಚಟುವಟಿಕೆಗಳಿಗಾಗಿ ಅವರು ತಮ್ಮ ಯಜಮಾನರಿಗಿಂತಲೂ ಹೆಚ್ಚು ಕಠೋರವಾದ ಶಿಕ್ಷೆಗೆ ಗುರಿಯಾಗುತ್ತಿದ್ದರು.[5]

ಕೆಲವು ಪರಿಸ್ಥಿತಿಗಳಲ್ಲಿ ದಾಸತ್ವವು ಒಂದು ಭಯಂಕರವಾದ ಸ್ಥಿತಿಯಾಗಿರಬಲ್ಲದಾಗಿತ್ತು. ಹೇಗೂ, ಅನೇಕ ದಾಸರೊಂದಿಗೆ ಉತ್ತಮವಾಗಿ ನಡೆದುಕೊಳ್ಳಲಾಗುತ್ತಿತ್ತು, ಮತ್ತು ಅನೇಕರಿಗೆ ಮೂವತ್ತು ವರ್ಷ ತುಂಬಿದಾಗ ಸ್ವಾತಂತ್ರ್ಯವನ್ನು ಹೊಂದಿಕೊಳ್ಳಬಹುದಾದ ಸದವಕಾಶವಿರುತ್ತಿತ್ತು. ಮೊದಲ ಶತಮಾನದ ರೋಮನ್ ಸಾಮ್ರಾಜ್ಯದಲ್ಲಿ, ದಾಸತ್ವವನ್ನು ಭಯಂಕರವಾಗಿ ಕೆಳಮಟ್ಟಕ್ಕೆ ತರುಗವಂಥದೆಂದು ಭಾವಿಸಲ್ಪಟ್ಟಿರಲಿಲ್ಲ; ಅದು ಸಂಸ್ಕೃತಿ ಹಾಗೂ ಆರ್ಥಿಕತೆಯ ಅತ್ಯಂಥ ಸಾರಭೂತವಾದ ಭಾಗವೆಂದು ಕಾಣಲಾಗುತ್ತಿತ್ತಷ್ಟೆ. ಸಾಧಾರಣವಾಗಿ, ಮಾರುಕಟ್ಟೆಯಲ್ಲಿ ದಾಸರು ಹಾಗೂ ದಾಸರಲ್ಲದವರ ನಡುವೆ ವ್ಯತ್ಯಾಸವನ್ನು ಗುರುತಿಸುವದು ಕಷ್ಟಕರವಾಗಿರುತ್ತಿತ್ತು ಯಾಕೆಂದರೆ ಎರಡು ಗುಂಪುಗಳು ಸಹ ಒಂದೇ ವಿಧವಾದ ಕೆಲಸವನ್ನು ಮಾಡುತ್ತಿದ್ದವು. ವೈಶಿಷ್ಟ್ಯವಾಗಿ, ದಾಸರು ಶಾರೀರಿಕ ಅಥವಾ ಬೌದ್ಧಿಕ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ

ಯಜಮಾನರಿಗಿಂತ ಕಡಿಮೆಯಾಗಿರಲಿಲ್ಲ. ಅನೇಕರು ಉತ್ತಮ ಶಿಕ್ಷಣ ಪಡೆದವರಾಗಿರುತ್ತಿದ್ದರು, ಮತ್ತು ಬಹಳಷ್ಟು ಜನರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ, ದಾಸರು ಸ್ವತಃ ದಾಸನ-ಯಜಮಾನರಾಗಿರುತ್ತಿದ್ದರು.

ಆದಿ ಸಭೆಯಲ್ಲಿ ದಾಸರು ಮತ್ತು ದಾಸನ-ಯಜಮಾನರು ಇಬ್ಬರೂ ಇದ್ದರೆಂಬುದನ್ನು ಹೊಸ ಒಡಂಬಡಿಕೆಯು ತೋರಿಸುತ್ತದೆ (ಎಫೆಸ 6:5-9; ಕೊಲೊಸ್ಸೆ 3:22-4:1). ದಾಸರಿಗೆ ಪ್ರಾಮಾಣಿಕರಾಗಿರಬೇಕು ಮತ್ತು ಶ್ರಮವಹಿಸಿ ದುಡಿಯಬೇಕು ಎಂದು ಬೋಧಿಸಲ್ಪಟ್ಟಿದ್ದರೆ, ಅವರ ಯಜಮಾನರಿಗೆ ನ್ಯಾಯವಾಗಿಯೂ ಸರಿಯಾಗಿಯೂ, ಮತ್ತು ಪಕ್ಷಪಾತವಿಲ್ಲದವರಾಗಿಯೂ ನಡೆದುಕೊಳ್ಳಬೇಕೆಂದು ಬೋಧಿಸಲಾಗಿರುತ್ತದೆ. ದಾಸರು ಮತ್ತು ಯಜಮಾನರು ಕರ್ತನೇ ಎಲ್ಲರಿಗೂ ಯಜಮಾನನೆಂಬುದನ್ನು ಗುರುತಿಸತಕ್ಕದ್ದು (ಕೊಲೊಸ್ಸೆ 4:1). ಹೊಸ ಒಡಂಬಡಿಕೆಯಲ್ಲಿ ಸ್ವತಃ ದಾಸತ್ವವನ್ನು ನೇರವಾಗಿ ಖಂಡಿಸಲಾಗಿರುವದಿಲ್ಲ, ಆದರೆ ಕ್ರಿಸ್ತನ ಸುವಾರ್ತೆಯು ಕ್ರಮೇಣದಲ್ಲಿ ಪ್ರಪಂಚದ ಅನೇಕ ಸ್ಥಳಗಳಲ್ಲಿ ಆ ದಾಸತ್ವದ ಪದ್ಧತಿಯನ್ನು ನಾಶಗೊಳಿಸಿದಂಥ ಬದಲಾವಣೆಗಳಿಗೆ ಚಾಲನೆಯನ್ನು ನೀಡಿತ್ತು. Michael R. Weed ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ, "ಆದಿ ಸಭೆಯು ಸ್ವಾತಂತ್ರ್ಯ ಮತ್ತು ಸಮಾನತೆಯ ಒಂದು ಸುವಾರ್ತೆಯನ್ನು ಸಾರುವ ವೇಳೆ ದಾಸತ್ವ ಮತ್ತು ಅನ್ಯಾಯದಿಂದ ತುಂಬಿದ್ದ ಪ್ರಪಂಚದೊಂದಿಗೆ ತಾತ್ಕಾಲಿಕ ಸಂಧಾನವನ್ನು ಮಾಡಿಕೊಳ್ಳುವದಕ್ಕೆ ಶಕ್ತವಾಗಿತ್ತು."[6] ದಾಸತ್ವದ ಅಭ್ಯಾಸಿಸುವದು ಮತ್ತು ಕ್ರೈಸ್ತ ಸಹೋದರತ್ವಕ್ಕೆ ನೀಡಲಾಗಿರುವ ಕರೆಯ ನಡುವಿನ ಘರ್ಷಣೆಯು ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಗೆ ತಕ್ಷಣದ ಹಿನ್ನಲೆಯನ್ನು ಒದಗಿಸುತ್ತದೆ.

## ಒಂದು ಸಂಕ್ಷಿಪ್ತ ಸ್ಥೂಲ ವಿವರಣೆ

I. ವಂದನೆಗಳು (ವಚನಗಳು 1-3)
II. ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆ (ವಚನಗಳು 4-7)
III. ಓನೇಸಿಮನಿಗಾಗಿ ಪೌಲನ ಮನವಿ (ವಚನಗಳು 8-20)
IV. ಮುಕ್ತಾಯ (ವಚನಗಳು 21-25)

---

### ಅಡಿಟಿಪ್ಪಣಿಗಳು

[1]Joseph A. Fitzmyer, *The Letter to Philemon*, The Anchor Bible, vol. 34c (New York: Doubleday, 2000), 8. [2]F. F. Bruce, *The Epistles to the Colossians, to Philemon, and to the Ephesians*, The New International Commentary on the New Testament (Grand Rapids, Mich.: Wm. B. Eerdmans Publishing Co., 1984), 206. [3]ಪತ್ರಿಕೆಯು ಇಡೀ ಸಭೆಗೋಸ್ಕರ ಬರೆಯಲ್ಪಟ್ಟಿತ್ತೆಂದು ನಂಬುವವರಲ್ಲಿ ಇವರೆಲ್ಲಾ ಸೇರಿರುತ್ತಾರೆ Fitzmyer; Markus Barth ಮತ್ತು Helmut Blanke, *The Letter to Philemon: A New Translation with Notes and Commentary*, The Eerdmans Critical Commentary (Grand Rapids, Mich.: Wm. B. Eerdmans Publishing Co., 2000); James D. G. Dunn, *The Epistles to the Colossians and to Philemon: A Commentary on the Greek Text*, The New International Greek Testament Commentary (Grand Rapids, Mich.: Wm. B. Eerdmans Publishing Co., 1996); and Norman R. Petersen, "Philemon," in

*The HarperCollins Bible Commentary*, ed. James Luther Mays (San Francisco, Calif.: Harper San Francisco, 2000), 1146–48. [4]Barth and Blanke, 5–8. [5]S. S. Bartchy, "Slavery," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:544. [6]Michael R. Weed, *The Letters of Paul to the Ephesians, the Colossians, and Philemon*, The Living Word Commentary, vol. 11 (Abilene, Tex.: ACU Press, 1971), 12.